ಮೈಸೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಯಡತೊರೆ ತಾಲ್ಲೂಕು ಮಿರ್ಲೆಯಲ್ಲಿ ಇರುವ ದಾಸಬಣಜಿಗರ ಮುದ್ದವೀರ ಕಟ್ಟವುಗ ಕರಿಕಟ್ಟ ಯಂಬವನ ವಿಷಯದಲ್ಲಿ—

ಸ್ನ 1889ನೇ ಇಸವಿ ದಿವಾಳಿ ಕೇಸ್ ನಂಬರ 4.

ಹುಕುಂ.

ಮೇಲ್ಕಂಡ ಕರಿಕಟ್ಟ ಯಂಬವನು ನಿರ್ಬಂಧದಿಂದ ಖುಲಾಸೇಯಾಗಬೆಕೆಂದು ಕೊಟ್ಟ ಅರ್ಜೀ ಅಂಕವು ಈ ಕೋರ್ಟು ರೂಬರೂ ಅರ್ಜೀದಾರನಾದ ಕರಿಕಟ್ಟ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ನಾರಾಯಣರಾಯರನ್ನು ಮತ್ತು ಸದರೀಯವನ ಲೇಣೇದಾರ್ರಾದ 1ನೇ ಬಂದ ಹಳ್ಳಿ ತಿಮ್ಮಾ 2ನೇ ಕೊನ್ನಾರಕಟ್ಟ 4ನೇ ಲಕ್ಷ್ಮಯ್ಯನ ಕಡೆ ಫಸ್ಟ್ ಗ್ರೇಡ್ ಪ್ಲೀಡರ್ ಸುಬ್ಬರಾಯರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ—3ನೇ ಬೊರೇಗೌಡ 5ನೇ ಲಕ್ಕೇಗೌಡ 6ನೇ ಹಾಳಿ 7ನೇ ತಿಮ್ಮಯ್ಯ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಕರಿಕಟ್ಟ ಯಂಬವನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಥಕ್ಕರವಾಗಿಯಾಗಲಿ ರಸ್ತಗಿರೀ ಮಾಡಲ್ಪಟ್ಟು ನಿರ್ಬಂಧವಡುವ ಜವಾಬ್ದಾರೀಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ನ 1889ನೇ ಇಸವಿ ಆಗಸ್ಟ್ 7ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ್ಯದಸ್ತ ಖತ್ತನಿಟು ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಪಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಹೊಬಳಿಗಳು.	ಯಾವಾಗ ದೇಣೇ ಹುಟ್ಟಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರ.
1	ಬಂದಹಳ್ಳಿ ತಿಮ್ಮಾ ...	50—0—0	..	ಡಿಕರು ಬಾಬತು	
2	ಮಿರ್ಲೆ ಕೊನ್ನಾರಕಟ್ಟ ..	100—0—0	..	ಆಧಾರ ತಮಸೂಕು ಬಾ	
4	ಡಿಟೋ ವೂರು ಲಕ್ಷ್ಮಯ್ಯ ..	50—0—0	..	ಡಿಟೋ	
		200—0—0			

ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರು ಮಂಡಿ ಮೊಹಲಾದಲ್ಲಿರುವ ಶಿವಾಚಾರದ ಗುರುಶಾಂತಪ್ಪ ಶಾಸ್ತ್ರಿಯಂಬವನ ವಿಷಯದಲ್ಲಿ—

ಸ್ನ 1889ನೇ ಇಸವಿ ದಿವಾಳೀ ಕೇಸ್ ನಂಬರ 175.

ಹುಕುಂ.

ಮೇಲ್ಕಂಡ ಗುರುಶಾಂತಪ್ಪ ಶಾಸ್ತ್ರಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಈ ಕೋರ್ಟು ರೂಬರೂ ಅರ್ಜೀದಾರನಾದ ಗುರುಶಾಂತಪ್ಪ ಶಾಸ್ತ್ರಿ ಖುದ್ದು ಹಾಜರ್ ಮತ್ತು ಸದರೀಯವನ ಲೇಣೇದಾರ್ರಾದ 1ನೇ (ಲಿ) ಸುಬ್ಬರಾಯರ ತರಫ ಅಡ್ವೊಕೇಟ್ ವೆಂ॥ ಆನಂದರಾಯರು ಇವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತ್ ನೋಟಿಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಗುರುಶಾಂತಪ್ಪ ಶಾಸ್ತ್ರಿಯಂಬವನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂ

ಧರಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನು ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1889ನೇ ಇಸವಿ ಆಗಸ್ಟ್ 7ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬಂದವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೆ ಹುಟ್ಟಿದ್ದು.	ದೇಣೆಯ ಸ್ವಭಾವಮತ್ತು ಆದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಮೈಸೂರು ಪುಷ್ಪವತಿ ಬ್ಯಾಂಕ್ (ಲಿ) ಸುಬ್ಬರಾಯ ಅಯ್ಯರ್	190 0 0	..	ಡಿಕ್ರೀ ಭಾಬತು.	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟು.

ನೋಟಿಸ.

1888—89ನೇ ಸಾಲ್‌ನಲ್ಲಿ ಮೈಸೂರು ಡಿಸ್ಟ್ರಿಕ್ಟು ಸ್ಟೇಟ್ ಫಾರೆಸ್ಟುಗಳಲ್ಲಿ ವುತ್ಪತ್ತಿಯಾದ ಇದರಡಿ ಕಂಡ ಅಳಲೇಕಾಯಿಯು 1889ನೇ ಇಸವಿ ಸೆಪ್ಟಂಬರು ತಾರೀಖು 2ರಲ್ಲು ಬಹಿರಂಗವಾದ ಹರಾಜು ಮೂಲಕ ಮೈಸೂರು ವೆಜ್ಯಾರ್ಡಿನಲ್ಲಿ ವಿಕ್ರಯಿಸಲ್ಪಡುತ್ತದೆ.

ಅಳಲೇಕಾಯಿ ಸುಮಾರು (3000) ಮಣಗಳು.

ಹರಾಜು ಕಾಲದಲ್ಲಿ ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ 87ನೇ ಇಸವಿ ಜೂ॥ 11ನೇ ತಾರೀಖಿನ ನೋಟಿಫಿಕೆಷ್ಟ್ ವೋದಲ್ಪಡುತ್ತದೆ.

ಸಿ. ನಾರಾಯಣರಾವ್,
ಅಸಿಸ್ಟೆಂಟ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್ ಮೈಸೂರು ಡಿಸ್ಟ್ರಿಕ್ಟು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷ್ಟ್.

ಮೈಸೂರು 20ನೇ ಜುಲೈ ಸ್ಯ 1889ನೇ ಇಸವಿ.

ಖರೀದಿಗೆ ಯಿರುವ ಆನೆಗಳು.

ಮೈಸೂರು ಕೀಮೆಯ ಕೆಡ್ಡಾದಲ್ಲಿ ಈಚಿಗೆ ಹಿಡಿಯಲ್ಪಟ್ಟ ಚಿಕ್ಕ ಪ್ರಾಯವಾಗಿಯೂ ಪಳ್ಳೀ ಸ್ಥಿತಿಯಲ್ಲಿಯೂ ಮತ್ತು ಬೇರೆಬೇರೆ ಸೈಜಂ ಉಳ್ಳದ್ದಾಗಿಯೂ ಇರುವ ಹೆಣ್ಣು ಮತ್ತು ಗಂಡು 29 ಆನೆಗಳು ಸ್ಯ 1889ನೇ ಇಸವಿ ಸೆಪ್ಟಂಬರ್ 1ನೇ ತಾರೀಖಿನ ದಿನ ಮೈಸೂರಿಗೆ 14 ಮೈಲಿ ಫಾಸಲೆಯಲ್ಲಿರುವ ನಂಜನಗೂಡಿನಲ್ಲಿ ಬಹಿರಂಗವಾದ ಹರಾಜು ಮೂಲಕ ಮಾರಲ್ಪಡುತ್ತವೆ. ಹರಾಜು ಕಾಲಕ್ಕೆ ಹಾಜರಾಗಲು ಅನುಕೂಲ ವಿಲ್ಲದವರು ತಮಗಾಗಿ ಖರೀದಿಗೆ ತೆಗಿಯುವಂತೆ ಈ ಕೆಳಗೆ ರುಜು ಮಾಡಿರುವವರಿಗೆ ಬರದುಕೊಳ್ಳಬಹುದು. ಮತ್ತು ಹಾಂಗೆ ಬರಿಯುವರು ಯಿಷ್ಟರವರಿಗೆ ಸವಾಲ್ ಮಾಡತಕ್ಕದ್ದೆಂತ ನಮೂದಿಸುತ್ತಾರೋ ಅಷ್ಟರವರಿಗೆ ಸವಾಲ್ ಮಾಡಲ್ಪಡುತ್ತೆ. ಹೀಂಗೆ ಬರಿಯತಕ್ಕ ಪ್ರತಿ ಒಬ್ಬರೂ ತಮ್ಮ ಕಾಗದದ ಸಂಗಡ 300 ರೂಪಾಯಿ ಕಳುಹಿಸಬೇಕು. ಇಲ್ಲವಾಯಿತೆ ಅಂಥಾ ಕಾಗದಕ್ಕೆ ನಿಗೆ ಕೊಡಲ್ಪಡುವದಿಲ್ಲ, ಆನೆ ಖರೀದಿಗೆ ತೆಗಿಯಲ್ಪಡದ ಸಂದರ್ಭದಲ್ಲಿ ಮೊಬಲಗ್ ವಾಪಸ್ ಮಾಡಲ್ಪಡುತ್ತೆ.

2. ಆನೆಗಳ ತಪಸೀಲ್‌ಪಟ್ಟಿ ಈ ಕೆಳಗೆ ನಮೂದಿಸಲ್ಪಟ್ಟಿದೆ. ಬೇಕಾದವರು ಈ ಕೆಳಗೆ ರುಜುಮಾಡಿ ಯಿರತಕ್ಕವರಿಗೆ ಬರದು ಕೊಂಡಲ್ಲಿ ಕಳುಹಿಸಲ್ಪಡುವದು.

3. ಆನೆಗಳನ್ನ ರೈಲ್‌ಮೇಲೆ ಸಾಗಿಸುವದಕ್ಕೆ ಬೇಕಾದ ಕುಮ್ಮಕ್ಕು ಬೇಡಿದಲ್ಲಿ ಕೊಡಲ್ಪಡುವದು.

4. ಬೇಕಡಾ 25 ರೂಪಾಯಿ ಮೇರೆ ಬೇವಣಿ ಮೊಬಲಗು ಸಮೀಪವಾಗಿ ಯಿರುವ ತಾಲ್ಲೂಕು ಖಜಾನೆಗೆ ಕೂಡ್ಲೆ ಪಾವತಿಮಾಡಬೇಕು. ಬಾಕಿ ಮೊಬಲಗನ್ನ ಹರಾಜು ತಾರೀಖು ಲಾಗಾಯತು 15 ದಿವಸದ ಒಳಗಾಗಿ ಮತ್ತು ಆನೆಗಳನ್ನ ಸಾಗಿಸುವದಕ್ಕೆ ಮುಂಚೆ ಪಾವತಿ ಮಾಡಬೇಕು, ತಪ್ಪಿದ ಪಕ್ಷದಲ್ಲಿ ಆ ಖರೀದಿದಾರನ ಅವಗುಣಕ್ಕೆ ಆನೆಗಳು ಪುನಃ ಹರಾಜು ಮಾಡಲ್ಪಡುವವು. ಅಂತಾ ಹರಾಜಿನಲ್ಲಿ ಜಾಸ್ತಿಯೇನಾದರೂ ಹುಟ್ಟುವಳಿ ಆದರೆ ಅದಕ್ಕೆ ಅವ್ವಲ್ ಖರೀದಿದಾರನಿಗೆ ಹಕ್ಕು ಯಿರುವದಿಲ್ಲ.